**ಚಾಸಾಃ 44 ಪ್ರಾಸಾಃ 30**

**ಹಿರಿಯ ಸಿವಿಲ್ ನ್ಯಾಯಾಧೀಶರು ಮತ್ತು ಪ್ರಥಮ ದರ್ಜೆ ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಸುಳ್ಯ, ದ.ಕ**

**ಸಿ.ಸಿ ಸಂಖ್ಯೆ: 2/2022**

| | |
|---|---|
| ಹೆಸರು | :ವಿದ್ಯಾಧರ |
| ತಂದೆಯ ಹೆಸರು | :ನಾಗಪ್ಪ ಗೌಡ |
| ಪ್ರಾಯ | :59 ವರ್ಷ |
| ಉದ್ಯೋಗ | :ಪಂಚಾಯತ್ ಗ್ರೇಡ್ 1 ಕಾರ್ಯದರ್ಶಿ |
| ವಾಸ | :ಆಲೆಟ್ಟಿ ಗ್ರಾಮ, ಸುಳ್ಯ ತಾಲೂಕು |

**ದಿನಾಂಕ 30.01.2026 ರಂದು ಸಾಕ್ಷಿಯನ್ನು ಕರೆಸಿ ವಿಧಿಬದ್ಧವಾಗಿ ಪ್ರಮಾಣವಚನ ಭೋಧಿಸಲಾಯಿತು.**

**ಮುಖ್ಯ ವಿಚಾರಣೆ ಮಾನ್ಯ ಸ. ಸ. ಅ. ರವರಿಂದಃ**

ನಾನು 4.7.2012 ರಿಂದ 28.1.2016 ರವರೆಗೆ ಮರ್ಕಂಜ ಗ್ರಾಮ ಪಂಚಾಯಿತಿಯಲ್ಲಿ ಕಾರ್ಯದರ್ಶಿಯಾಗಿ ಕಾರ್ಯ ನಿರ್ವಹಿಸಿರುತ್ತೇನೆ.

ದಿ. 19.1.2015 ರ ಎರಡು ದಿನ ಮೊದಲು ಈ ಪ್ರಕರಣಕ್ಕೆ ಸಂಬಂಧಪಟ್ಟಂತೆ ಕಡತಗಳನ್ನು ನೀಡುವಂತೆ ಸುಳ್ಯ ಪೊಲೀಸ್ ಠಾಣೆಯಿಂದ ಸುಳ್ಯ ತಾಲೂಕು ಪಂಚಾಯತ್ ಕಾರ್ಯ ನಿರ್ವಹಣಾಧಿಕಾರಿಗಳಿಗೆ ಬಂದ ಲಿಖಿತ ಸೂಚನಾ ಪತ್ರದ ಮೇರೆಗೆ ಸದರಿ ಕಾರ್ಯ ನಿರ್ವಹಣಾಧಿಕಾರಿಗಳು ನನಗೆ ದಾಖಲೆಗಳನ್ನು ನೀಡುವಂತೆ ಮೌಖಿಕವಾಗಿ ಸೂಚನೆ ನೀಡಿದ್ದು, ದಿ. 19.1.2015 ರಂದು ಸುಳ್ಯ ಪೊಲೀಸ್ ಠಾಣೆಯಿಂದ ಪೊಲೀಸರು ಬಂದಿದ್ದು, 2005-06 ರಿಂದ 2008-09 ರವರೆಗೆ ವಸತಿ ಯೋಜನೆಗೆ ಸಂಬಂಧಪಟ್ಟ ದಾಖಲೆ ಪತ್ರಗಳನ್ನು ಹಾಜರು ಪಡಿಸುವಂತೆ ಕೇಳಿದ್ದು, ಅದರಂತೆ ನಾನು 2005-06 ರ ಇಂದಿರಾ ಆವಾಜ್ ಯೋಜನೆಯ 15 ಫಲಾನುಭವಿಗಳ ಮೂಲ ಅರ್ಜಿ ಮತ್ತು ವಸತಿ ಯೋಜನೆಗೆ ಸಂಬಂಧಪಟ್ಟ

ದಾಖಲೆಗಳನ್ನು ನೀಡಿರುತ್ತೇನೆ. ಜಾನಕಿ ಎಂಬುವವರ ಪೈಕಿ ದಾಖಲೆ ಸಿಕ್ಕಿರುವುದಿಲ್ಲ. 2003 ರಿಂದ 2006 ರ ತನಕ ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳಿಗೆ ಸಂದಾಯವಾದ ಮೊತ್ತದ ರಿಜಿಸ್ಟರನ್ನು ನೀಡಿರುತ್ತೇನೆ. ಸದರಿ ದಾಖಲೆಗಳನ್ನು ಪೊಲೀಸರು ಸಾಕ್ಷಿದಾರರಾದ, ಆ ಸಮಯದಲ್ಲಿ ಪಂಚಾಯಿತಿ ಅಧ್ಯಕ್ಷರಾದ ಗಿರಿಜಾ, ಗುಮಾಸ್ತೆ ನೇತ್ರಾವತಿಯವರ ಸಮಕ್ಷಮದಲ್ಲಿ ಸ್ವೀಕರಿಸಿ ಈ ಬಗ್ಗೆ 11 ರಿಂದ 12 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ನಿಪಿ-71 ಎಂದು ಸಾಕ್ಷಿಯ ಸಹಿಯನ್ನು ನಿಪಿ-71(ಎ) ಎಂದು ಗುರುತಿಸಲಾಯಿತು. 2005-06 ರ ಇಂದಿರಾ ಆವಾಜ್ ಯೋಜನೆಯ 15 ಫಲಾನುಭವಿಗಳ ಮೂಲ ಅರ್ಜಿ ಮತ್ತು ವಸತಿ ಯೋಜನೆಗೆ ಸಂಬಂಧಪಟ್ಟ ದಾಖಲೆಗಳುಳ್ಳ 15 ಫೈಲುಗಳನ್ನು ಈಗಾಗಲೇ ಮೂಲ ದಾಖಲೆ ಸಂಃ 348/2015 ರಲ್ಲಿ ನಿಪಿ-143 ರಿಂದ 157 ಎಂದು ಗುರುತಿಸಲಾಗಿದೆ. 2003 ರಿಂದ 2006 ರ ತನಕ ಇಂದಿರಾ ಆವಾಜ್ ಯೋಜನೆಯ ಫಲಾನುಭವಿಗಳಿಗೆ ಸಂದಾಯವಾದ ಮೊತ್ತದ ರಿಜಿಸ್ಟರನ್ನು ನೋಡುತ್ತಿದ್ದು ಅದನ್ನು ಈಗಾಗಲೇ ಮೂಲ ದಾಖಲೆ ಸಂಃ 348/2015 ರಲ್ಲಿ ನಿಪಿ-13 ಮತ್ತು 14 ಎಂದು ಗುರುತಿಸಲಾಗಿದೆ.

ಅದೇ ದಿನ 2007-08ರ ಇಂದಿರಾ ಆವಾಜ್ ಯೋಜನೆಗೆ ಸಂಬಂಧಪಟ್ಟ ಫಲಾನುಭವಿಗಳು ನೀಡಿದ ಅರ್ಜಿ ಮತ್ತು ದಾಖಲೆಗಳನ್ನೊಳಗೊಂಡ 20 ಕಡತಗಳನ್ನು ಪೊಲೀಸರು ಸಾಕ್ಷಿದಾರರಾದ, ಆ ಸಮಯದಲ್ಲಿ ಪಂಚಾಯಿತಿ ಅಧ್ಯಕ್ಷರಾದ ಗಿರಿಜಾ, ಗುಮಾಸ್ತೆ ನೇತ್ರಾವತಿಯವರ ಸಮಕ್ಷಮದಲ್ಲಿ ಸ್ವೀಕರಿಸಿ ಈ ಬಗ್ಗೆ 12 ರಿಂದ 1 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ಸದರಿ ಪಂಚನಾಮೆಗಳನ್ನು ನೋಡುತ್ತಿದ್ದು ಅದನ್ನು ನಿಪಿ-72 ಎಂದು, ಸಾಕ್ಷಿಯ ಸಹಿಯನ್ನು ನಿಪಿ-72(ಎ) ಎಂದು ಗುರುತಿಸಲಾಯಿತು. 20 ದಾಖಲೆಗಳನ್ನು ಈಗಾಗಲೇ ಮೂಲ ದಾಖಲೆ ಸಂಃ 348/2015 ರಲ್ಲಿ ನಿಪಿ-159 ರಿಂದ 178 ಎಂದು ಗುರುತಿಸಲಾಗಿದೆ.

ಅದೇ ದಿನ 2008-09ರ ಇಂದಿರಾ ಆವಾಜ್ ಯೋಜನೆಗೆ ಸಂಬಂಧಪಟ್ಟ ಫಲಾನುಭವಿಗಳು ನೀಡಿದ ಅರ್ಜಿ ಮತ್ತು ಮೂಲ ದಾಖಲೆಗಳನ್ನೊಳಗೊಂಡ 27 ಕಡತಗಳನ್ನು ಪೊಲೀಸರು ಸಾಕ್ಷಿದಾರರಾದ ಆ ಸಮಯದಲ್ಲಿ ಪಂಚಾಯಿತಿ ಅಧ್ಯಕ್ಷರಾದ ಗಿರಿಜಾ, ಗುಮಾಸ್ತೆ ನೇತ್ರಾವತಿಯವರ ಸಮಕ್ಷಮದಲ್ಲಿ ಸ್ವೀಕರಿಸಿ ಈ ಬಗ್ಗೆ 1 ರಿಂದ 2 ಗಂಟೆಯವರೆಗೆ ಪಂಚನಾಮೆ ತಯಾರಿಸಿರುತ್ತಾರೆ. ಸದರಿ ಯೋಜನೆಯ ಸಂಬಂಧ ಶ್ಯಾಮಲಾ ಎಂಬುವವರಿಗೆ ಸಂಬಂಧಪಟ್ಟ ದಾಖಲೆ ಸಿಕ್ಕಿರುವುದಿಲ್ಲ. ಸದರಿ ಪಂಚನಾಮೆಯನ್ನು ನೋಡುತ್ತಿದ್ದು ಅದನ್ನು ನಿಪಿ-73 ಎಂದು, ಸಾಕ್ಷಿಯ ಸಹಿಯನ್ನು ನಿಪಿ-73(ಎ) ಎಂದು ಗುರುತಿಸಲಾಯಿತು. 27 ದಾಖಲೆಗಳನ್ನು ಈಗಾಗಲೇ ಮೂಲ ದಾಖಲೆ ಸಂಃ 348/2015 ರಲ್ಲಿ ನಿಪಿ-180 ರಿಂದ 206 ಎಂದು ಗುರುತಿಸಲಾಗಿದೆ.

ನಮ್ಮ ಗ್ರಾಮ ಪಂಚಾಯಿತಿಯಲ್ಲಿ ಗುಮಾಸ್ತರಾಗಿ ಕೆಲಸ ಮಾಡುತ್ತಿದ್ದ ಕೇಶವರವರು ಗುಮಾಸ್ತ ಹುದ್ದೆಗೆ ಜಿಲ್ಲಾ ಪಂಚಾಯಿತಿಯಿಂದ ಅನುಮೋದನೆ ಆದ ಬಗ್ಗೆ ನಕಲನ್ನು ಪೊಲೀಸರಿಗೆ ನೀಡಿರುತ್ತೇನೆ. ಸದರಿ ದಾಖಲೆಯನ್ನು ನೋಡುತ್ತಿದ್ದು ಅದನ್ನು ನಿಪಿ-74 ಎಂದು ಗುರುತಿಸಲಾಯಿತು. 2008-09 ರಲ್ಲಿ ಅಧ್ಯಕ್ಷರಾಗಿದ್ದ ಶಿವರಾಮ್ ರವರನ್ನು 2ನೇ ಅವಧಿಗೆ ಚುನಾವಣಾಧಿಕಾರಿಗಳು ಆಯ್ಕೆ ಮಾಡಿದ ಬಗ್ಗೆ ಸಭೆಯ ನಡಾವಳಿಯ ನಕಲನ್ನು ಸಹ ನೀಡಿರುತ್ತೇನೆ. ಸದರಿ ದಾಖಲೆಯನ್ನು ನೋಡುತಿದ್ದು ಅದನ್ನು ನಿಪಿ-75 ಎಂದು, ಸಾಕ್ಷಿಯ ಸಹಿಯನ್ನು ನಿಪಿ-75(ಎ) ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮುಂದುವರಿದ ಮುಖ್ಯ ವಿಚಾರಣೆಗೆ ಕಾಲಾವಕಾಶ ಕೇಳಿದ ಮೇರೆಗೆ ಮುಂದೂಡಲಾಯಿತು)

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

(ಸಾ.ಓ.ಹೇ.ಕೇ.ಸ.ಇ.ಎ.ಒ)

ಹಿರಿಯ ಸಿವಿಲ್ ನ್ಯಾಯಾಧೀಶರು
ಮತ್ತು ಪ್ರ.ದ.ನ್ಯಾದಂ. ಸುಳ್ಯ